




ಅಸಮಾಧಾನ ಹೊಗೆಯಾಡುತ್ತಿತ್ತು; ಎತ್ತ ನೋಡಿದರೂ ಒಂದೇ ಒಂದು ಗುಂಜು ಹಿಮವೂ ಕಾಣಿಸದೆ ಇದ್ದುದಕ್ಕೆ! 'ಹಿಮಾಲಯದಲ್ಲಿ ಹಿಮವೇ ಕಾಣುತ್ತಿಲ್ಲವಲ್ಲ ಸರ್' ಎಂದು ಕೇಳಿದೆ. ತಕ್ಷಣ ಅವರು, 'ನೀವು ರಾಂಗ್ ಟೈಮ್‌ನಲ್ಲಿ ಬಂದಿದ್ದೀರಿ. ಈ (ಏಪ್ರಿಲ್) ಅವಧಿಯಲ್ಲಿ ಹಿಮ ಬೀಳುವುದಿಲ್ಲ. ಅದೇನಿದ್ದರೂ ಡಿಸೆಂಬರ್–ಜನವರಿಯಲ್ಲಿ. ಆದರೂ ಈ ಅವಧಿಯಲ್ಲೂ ಒಳ್ಳೆಯ ಚಿತ್ರ ತೆಗೆಯಬಹುದು' ಎಂದು ಅತ್ಯಂತ ಸಹಜವಾಗಿ ಹೇಳಿದರು. ನನ್ನ ಸ್ವಪ್ನಸರಣಿ ನುಚ್ಚುನೂರಾದುದು ಅವರಿಗೆ ಹೇಗೆ ತಿಳಿಯಬೇಕು. ಆದರೆ, ಅಲ್ಲಿಯವರೆಗೂ ಹೋಗಿ ಬೇಸರ ಮಾಡಿಕೊಂಡು ಕೂರುವುದು ಸಾಧ್ಯವೇ? ಉತ್ಸಾಹವನ್ನು ನವೀಕರಿಸಿಕೊಂಡು ಮುಂದಿನ ಪಯಣಕ್ಕೆ ಸಜ್ಜಾದೆ.

ಸಮುದ್ರಮಟ್ಟದಿಂದ ಸುಮಾರು 6200 ಅಡಿ ಎತ್ತರವಿರುವ ಉತ್ತರಕಾಂಡ ರಾಜ್ಯದ ಭಾಗೇಶ್ವರ ಜಿಲ್ಲೆಯ ಕೌಸಾನಿ ದೊಡ್ಡ ಪಟ್ಟಣವಲ್ಲ. ಈ ಸುಂದರ ಗಿರಿಧಾಮ ಡಿಸೆಂಬರ್–ಜನವರಿಯಲ್ಲಿ ಹಿಮಹೊದ್ದುಕೊಂಡಿದ್ದರೆ, ಮಾರ್ಚ್–ಏಪ್ರಿಲ್ ತಿಂಗಳಿನಲ್ಲಿ ಹಿಮದ ಒಂದು ಗುಂಜೂ ಸಹ ಅಲ್ಲಿ ಕಾಣುವುದಿಲ್ಲ. ಆದರೂ ಎರಡೂ ಋತುಗಳಲ್ಲೂ ಪ್ರವಾಸಿಗರಿಂದ ಹಾಗೂ ಛಾಯಾಗ್ರಾಹಕರಿಂದ ಗಿಜಿಗುಡುತ್ತದೆ.

ಪೈನ್ ಮರಗಳಿಂದ ಆವೃತ್ತವಾದ ಇಲ್ಲಿನ ಪರ್ವತಗಳು ಸರ್ವಾಲಂಕೃತ ಸುಂದರಿಯಂತೆ ಹಸಿರು ಹೊದ್ದಿರುತ್ತವೆ. ಅಲ್ಲಲ್ಲಿ ಕಾಣುವ ಉತ್ತರಕಾಂಡದ ಅನ್ನದಾತರ ವೇಷಭೂಷಣಗಳು ಬಹುವರ್ಣಮಯ. ವಿಶೇಷವಾಗಿ ಕೆಂಪು, ಹಳದಿ, ಹಸಿರು ಗಾಢವರ್ಣದ ದಿರಿಸುಗಳನ್ನು ಧರಿಸಿ ಗದ್ದೆಗಳಲ್ಲಿ ಕೆಲಸ ಮಾಡುವಾಗ ಇಡೀ ಲ್ಯಾಂಡ್‌ಸ್ಕೇಪ್‌ನ ಭಾಗವಾಗಿ ಅವರು ಕಾಣುವ ಅಂದ ಬೆರಗುಮೂಡಿಸುತ್ತದೆ. ಈ ಗದ್ದೆಗಳೇ ಲ್ಯಾಂಡ್‌ಸ್ಕೇಪ್ ಫೋಟೋಗ್ರಫಿಯ ಆರ್ಟ್ ಫಾರ್ಮ್ಸ್!

ಕಲಬುರಗಿಯ ಕಲಾವಿದರಾದ ನಾಡೋಜ ಜೆ.ಎಸ್. ಖಂಡೇರಾವ್ ಅವರ ವಿಂಡೋಸ್ ಹಳದಿ ಸರಣಿಯ ತೈಲಚಿತ್ರಗಳ ಮೈವಳಿಕೆ ಹಾಗೂ ಫಾರ್ಮ್‌ಗಳನ್ನು ಹೋಲುವ ಇಲ್ಲಿನ ಛಾಯಾಚಿತ್ರಗಳಲ್ಲಿ ಹಿಮವೇ ಕಾಣದಿದ್ದರೂ ಪರ್ಣವಿನ್ಯಾಸಗಳ ಅಮೂರ್ತ (ಅಬ್‌ಸ್ಟ್ರ್ಯಾಕ್ಟ್ ಪೇಂಟಿಂಗ್) ದೃಶ್ಯವೈಭವ ಅನೂಹ್ಯ.

## ಕೌಸಾನಿಯಲ್ಲಿ ನಿತ್ಯೋತ್ಸವ

ಬೆಟ್ಟದಿಂದ ಹರಿದು ಬರುವ ಸಣ್ಣಪುಟ್ಟ ತೊರೆಗಳ ಜುಳುಜುಳು ನೀನಾದ ಆಲಿಸುತ್ತ, ಕೃಷಿ ಜಮೀನುಗಳ ವಿನ್ಯಾಸ ಕ್ಯಾನ್ವಾಸ್‌ನಲ್ಲಿ ಚಿತ್ರಿಸಿದಂತೆ ಗೋಚರವಾಗುವ ಬಗೆ ಅನನ್ಯ. ಬೆಟ್ಟದ ಮೇಲೊಂದು ಮನೆಯ ಮಾಡಿ, ಬೆಟ್ಟದ ಒಡನಾಡಿಯಾಗಿರುವ ಇಲ್ಲಿನ ಜನ ಬಹಳ ಶ್ರಮಿಕರು ಹಾಗೂ ಆರ್ಥಿಕವಾಗಿ ದುರ್ಬಲರು. ಇರುವ ಗೇಣುದ್ದದ ಹದವಾದ ಭೂಮಿಯಲ್ಲೂ ಭರ್ಜರಿಯಾಗಿ ತರಕಾರಿಯನ್ನು, ದ್ವಿದಳ ಬೆಳೆಯನ್ನು ಬೆಳೆಯಬಲ್ಲರು. ಭೂಮಿಯನ್ನು ಹದಗೊಳಿಸಿ ನಾಟಿ ಮಾಡುವುದು, ಬಿತ್ತುವುದು ಎಲ್ಲವನ್ನೂ ಸಹ ಕೈಕೆಸರಾಗಿಸಿಕೊಂಡು ಮಾಡುತ್ತಾರೆ. ಇಂತಹ ಲ್ಯಾಂಡ್‌ಸ್ಕೇಪ್‌ಗಳನ್ನು ನೋಡಿ ಸವಿಯುವ ಪ್ರವಾಸಿಗರು ಮತ್ತು ಕ್ಲಿಕ್ಕಿಸುವ ಛಾಯಾಗ್ರಾಹಕರೇ ಕೌಸಾನಿಯ ನಿತ್ಯೋತ್ಸವದ ಅತಿಥಿಗಳು.

ಕೋಸಿ, ಗೋಮತಿ ಹಾಗೂ ರಾಮಗಂಗಾ ನದಿಗಳು ಹರಿಯುವ ಇಲ್ಲಿ ಕೃಷಿ ಆಧಾರಿತ ಗದ್ದೆಗಳೇ ಸುಂದರವಾದ ಛಾಯಾಚಿತ್ರಗಳ ಅಂತರಂಗ. ಕೌಸಾನಿಯಿಂದ ಭಾಗೇಶ್ವರದತ್ತ ಸಾಗಿ ಟೀತೋಟಗಳ ಲ್ಯಾಂಡ್‌ಸ್ಕೇಪ್ ಚಿತ್ರಿಸಿಕೊಳ್ಳಲು ಮಳೆರಾಯ ಅನುಮತಿಸಲಿಲ್ಲ. ಇಂತಹ ಲ್ಯಾಂಡ್‌ಸ್ಕೇಪ್ ಚಿತ್ರಣಗಳನ್ನು ರಾಣೀಖೇತ್, ಅಲ್ಮೋರಾ ಹಾಗೂ ನೈನಿತಾಲ್ ಸುತ್ತಮುತ್ತಲೂ ಸೆರೆಹಿಡಿಯಬಹುದು.

ಇಲ್ಲಿನ ಪ್ರಕೃತಿಯ ಅಂದಕ್ಕೆ ಮನಸೋಲದವರಾರು? ಹಿಮಾಲಯದ ತಪ್ಪಲಿನ 'ಕೌಸಾನಿ'ಯನ್ನು ಭಾರತದ ಸ್ವಿಟ್ಜರ್‌ಲ್ಯಾಂಡ್ ಎಂದು ಬಣ್ಣಿಸಿದ್ದ ಮಹಾತ್ಮ ಗಾಂಧೀಜಿ, 21 ದಿನಗಳ ಕಾಲ ಇಲ್ಲಿನ 'ಅನಶಕ್ತಿ ಆಶ್ರಮ'ದಲ್ಲಿ ಇದ್ದುಕೊಂಡೇ 'ಅನಶಕ್ತಿ ಯೋಗ ಗ್ರಂಥ'ವನ್ನು ಲಿಪಿಗಿಳಿಸಿರುವುದರ ಹಿನ್ನೆಲೆಯಲ್ಲಿ ಕೌಸಾನಿಯ ರಮ್ಯಪ್ರಕೃತಿಯ ಪ್ರೇರಣೆ ಇದೆ.

**ಕೌಸಾನಿಯಿಂದ ಕಾಟ್‌ಗೋಡಾಮ್ 145 ಕಿ.ಮೀ. ದೂರದಲ್ಲಿದೆ. ಕೌಸಾನಿಯಿಂದ ಅನೇಕ ಪ್ರೇಕ್ಷಣೀಯ ಸ್ಥಳಗಳು ಸಮೀಪದಲ್ಲಿಯೇ ಇವೆ. ಪಂತನಗರ ವಿಮಾನ ನಿಲ್ದಾಣ 171 ಕಿ.ಮೀ., ರಾಣಿಖೇತ್ 59 ಕಿ.ಮೀ., ನೈನಿತಾಲ್ 115 ಕಿ.ಮೀ., ಜಿಮ್‌ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ 155 ಕಿ.ಮೀ. ಅಂತರದಲ್ಲಿವೆ.**